ಇರಬೇಕು?' ಎಂದು ಪ್ರಶ್ನಿಸುವ ಪರಿಸ್ಥಿತಿ ಸೃಷ್ಟಿಯಾಯಿತು. ನಂತರ ಭಯೋತ್ಪಾದನೆ ಬಂದ ಮೇಲೆ ಪರಿಸ್ಥಿತಿ ಇನ್ನಷ್ಟು ಭೀಕರವಾಯ್ತು. ಈ ಎಲ್ಲವೂ ಕೂಡ ಸಾಹಿತಿಯಾಗಿ ನಾನು ಎದುರಿಸಬೇಕಾದ ಸವಾಲುಗಳು. ನಾನು ಮಾನವೀಯ ದೃಷ್ಟಿಕೋನದಲ್ಲಿ ನೋಡುವವನು, ಮಾನವೀಯತೆಯ ದಾರಿಯಲ್ಲಿ ಹೋಗುವವನಾಗಿ ಈ ಎಲ್ಲ ಸವಾಲುಗಳನ್ನು ಹೇಗೆ ಎದುರಿಸುವುದು ಎನ್ನುವುದು ನಮ್ಮೆದುರಿನ ದೊಡ್ಡ ಸವಾಲಾಗಿತ್ತು.

1979ರಲ್ಲಿ ಬಂಡಾಯ ಸಾಹಿತ್ಯ ಹುಟ್ಟಿಕೊಂಡ ನಂತರ ನಮಗೆ ಬರೆಯಲಿಕ್ಕೆ ಒಂದು ಧೈರ್ಯ ಬಂತು. ನಾವು ಒಂದು ಗುಂಪಿನೊಂದಿಗೆ ಸೇರಿಕೊಂಡು, ನಾವೂ ನಿಮ್ಮಂಥವರೇ ಎಂದು ಧೈರ್ಯಪಡುವ ಅವಕಾಶ ಸೃಷ್ಟಿಯಾಯ್ತು. ನಮಗೆ ಒಂದು ಬಗೆಯ ಪ್ರೋತ್ಸಾಹ ಕೂಡ ಸಿಕ್ತು. ಕೋಮುವಾದದ ವಿಚಾರದಲ್ಲಿಯೂ ನಮ್ಮ ನಂಬಿಕೆಗಳು ಮತ್ತು ಬಂಡಾಯದ ಗೆಳೆಯರ ನಂಬಿಕೆಗಳ ನಡುವೆ ಸಾಮ್ಯತೆ ಇತ್ತು. ಇದರಿಂದಾಗಿ ಬಂಡಾಯದವರೊಂದಿಗೆ ಸೇರಿಕೊಂಡು ಕೋಮುವಾದದ ವಿರುದ್ಧ ಹೋರಾಡಲು ಸಾಧ್ಯವಾಯ್ತು. ನಂತರ ಅದು ಎಡಪಂಥೀಯ ಎಂದು ಬ್ರ್ಯಾಂಡ್ ಆಯಿತು.

ಆಗಿನ ಕಾಲದಲ್ಲಿ ಮುಸ್ಲಿಮರ ಬಗ್ಗೆ ಇರುವ ದ್ವೇಷದಿಂದ ಹುಟ್ಟಿಕೊಂಡ ಕೋಮುವಾದ ಇಂದು ಬೆಳೆದ ರೀತಿ ಹೇಗಿದೆ ಎಂದರೆ, ನಮ್ಮ ಬಗ್ಗೆ ಸಾಕಷ್ಟು ಸಹಾನುಭೂತಿ ಹೊಂದಿದ್ದ ಗೆಳೆಯರೂ ಕೂಡ ನಮ್ಮಲ್ಲಿ ಮುಸ್ಲಿಂತನವನ್ನೇ ಗುರ್ತಿಸುವ ಹಾಗಾಗಿದೆ. ಈ ಎಲ್ಲವೂ ನನಗೆ ಹೊಸತು. ಹಿಂದಿನ ಹತ್ತು ಹದಿನೈದು ವರ್ಷಗಳ ಹಿಂದಿನ ಬದುಕನ್ನು ನೆನೆಸಿಕೊಂಡು ಈಗ ಊರಿಗೆ ಹೋದರೆ ಅಲ್ಲಿ ನಾನೊಬ್ಬ

